ಶ್ರೀ ಕೆ. ಎಚ್. ಪಾಟೀಲ್ —ನಾನು ಅಧಿಕಾರಿಗಳ ಸಹಕಾರವಿಲ್ಲ ಎಂದು ಹೇಳುವುದಕ್ಕೆ ತಯಾರಿಲ್ಲ. ಅಧಿಕಾರಿಗಳಿಗೆ ಆ ಭಾಷೆ ಹೊಂದಾಣಿಕೆಯಾಗಿಲ್ಲ, ಇನ್ನೂ ಸೂಕ್ತವಾದ ವಾತಾವರಣ ಬಂದಿಲ್ಲ. ಅದನ್ನು ತಿದ್ದುಪಾಟು ಮಾಡಲಿಕ್ಕೆ ಎಲ್ಲ ರೀತಿಯಿಂದ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಾಟಾಳ್ ನಾಗರಾಜ್ .—ಕನ್ನಡ ಟೈಪರೈಟರುಗಳನ್ನು ಯಾವ ಏಜೆನ್ಸಿಯಿಂದ ಕೊಂಡುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೀರಿ ಮತ್ತು ಇದರಲ್ಲಿ ಶ್ರೀ ಅನಂತ ಸುಬ್ಬರಾಯರ ಕನ್ನಡ ಟೈಪರೈಟರ್ ಬಹಳ ಚೆನ್ನಾಗಿತ್ತು ಎನ್ನುವ ವಾದವಿದೆ. ಅದನ್ನು ಬಿಟ್ಟು ಬೇರೆ ಏಜೆನ್ಸಿಯಿಂದ ಕೊಂಡುಕೊಳ್ಳತಕ್ಕ ಸಲಹೆಯೇನೋ ಸರ್ಕಾರದ ಮುಂದೆ ಇದೆ ಎಂದು ಗೊತ್ತಾಗಿದೆ. ಆದ್ದರಿಂದ ಯಾವ ಏಜೆನ್ಸಿ ಮೂಲಕ ತೆಗೆದುಕೊಳ್ಳುತ್ತೀರಿ ಮತ್ತು ಒಂದೊಂದು ತಾಲ್ಲೂಕು ಆಫೀಸಿಗೂ ಎಷ್ಟೆಷ್ಟು ಕನ್ನಡ ಟೈಪರೈಟರುಗಳನ್ನು ಕೊಡಬೇಕೆಂದು ಮಾಡಿದ್ದೀರಿ ? ಎಲ್ಲ ಆಫೀಸುಗಳಿಗೂ ಎಷ್ಟು ಟೈಪ್‌ರೈಟರುಗಳನ್ನು ಕೊಡಬೇಕೆಂದು ಮಾಡಿದ್ದೀರಿ ?

ಶ್ರೀ ಕೆ. ಎಚ್. ಪಾಟೀಲ್ :—ನನ್ನ ಕೈಯಲ್ಲಿದ್ದ ಆರ್ಡರ ಪ್ರಕಾರ,

"Sanction is accorded to the renewal of sanction accorded for the purchase of 300 Kannada Typewriters from Messrs. Remington Rand of India, Calcutta, with modification in the approved 'Anantha Key Board' at the rate fixed by the Director of Supplies and Disposal."

ಇದೂ ಆಲ್ಲದೆ ಎಲ್ಲೆಲ್ಲಿ ಕನ್ನಡ ಟೈಪ್‌ರೈಟರುಗಳು ಉತ್ತಮವಾದುವು ಸಿಕ್ಕುತ್ತವೆ ಎನ್ನುವುದನ್ನು ತನಿಖೆ ಮಾಡುತ್ತಿದ್ದೇವೆ. ಅದರಲ್ಲಿ ಸೂಕ್ತವಾದುದನ್ನು ಕೊಂಡುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

IRRIGATIONS UNDER HEMAVATHI PROJECT.

413. SRI T. M. MANJUNATH (Tiptur).—Will the Minister of State for Major Irrigation be pleased to state :—

(*a*) the total irrigated area under Hemavathy Project ;

(*b*) whether the Government has conducted any survey in Tiptur Taluk in respect of irrigation potential under Hemavathi Project ;

(*c*) whether after survey. Government has obtained any technical opinion in this behalf ;

(*d*) if so, the names of taluks in respect of which technical opinion about the irrigation potential has been obtained ?

SRI H.N. NANJE GOWDA (Minister of State for Major Irrigation).—

(*a*) and (*b*) One lakh acres as per the scope of the project under execution. Investigation are under way to increase the scope.

(*c*) The planning of Hemavathy Project for tha full utilisation of available waters is under examination and it is not yet finalised.

(*d*) Does not arise in view of reply to claus (*c*).

ಶ್ರೀ ಟಿ. ಎ. ಮಂಜುನಾಥ.—ತಿಪಟೂರು ತಾಲ್ಲೂಕಿನಲ್ಲಿ ಎಷ್ಟು ಎಕರೆ ನೀರಾವರಿಯಾಗುತ್ತದೆ ಎಂದು ಕೇಳಿರುವುದಕ್ಕೆ ಯಾವ ತರಹ ನೇರವಾದ ಉತ್ತರವೂ ಕಂಡು ಬರುತ್ತಿಲ್ಲ. ಇದರ ಬಗ್ಗೆ ದಯವಿಟ್ಟು ಹೇಳುತ್ತಾರೆಯೇ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ಮಂಜೂರಾತಿಯಾಗಿರತಕ್ಕದ್ದು ೨೨.೬ ಎಂ. ಸಿ. ನೀರನ್ನು ಒರಿಜಿನಲ್ ಪ್ರಾಜೆಕ್ಟ್ ಪ್ರಕಾರವಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ. ಇದರ ಜೊತೆಗೆ ಬಲಭಾಗದ ನಾಲೆಯಿಂದ ೮ ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದ್ದು, ಒಟ್ಟು ೩೦ ಟಿ. ಎಂ. ಸಿ ವರೆಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ. ೬೪ ಟಿ. ಎಂ. ಸಿ. ವರೆಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ. ಆವಾಗ ತಿಪಟೂರಿಗೆ ನೀರನ್ನು ಕೊಡಬಹುದು ಎನ್ನುವುದು ಅಭಿಪ್ರಾಯ. ಅದಕ್ಕೋಸ್ಕರ ಇದನ್ನೆಲ್ಲ ನಾವು ಪರಿಶೀಲನೆ ಮಾಡುತ್ತ ಇದ್ದೇವೆ. ಒಟ್ಟು ಎಷ್ಟು ನೀರನ್ನು ಪಡೆಯುತ್ತೇವೆ ಎನ್ನುವ ವಿಚಾರದಲ್ಲಿ ಒಂದು ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಆಗಿದೆ. ಅದು ಮುಂದೆ ಗೊತ್ತಾಗತಕ್ಕ ವಿಷಯ.

ಶ್ರೀ ಎಚ್. ಡಿ. ದೇವೇಗೌಡ.—೬೪ ಟಿ. ಎಂ. ಸಿ. ನೀರು ನಮಗೆ ಸಿಕುತ್ತದೆ ಎನ್ನುವ ನಂಬಿಕೆ ಇದೆಯೋ? ಏಕೆಂದರೆ ಮಾಫನಕೆರೆ ಹತ್ತಿರ ಆಕ್ವಡೆಕ್ಟ್ ಕಟ್ಟುವುದನ್ನು ತಡೆ ಹಿಡಿದಿದ್ದಾರೆ ಒಂದು ಕಡೆ ಕೆಲಸವಾಗುವುದನ್ನು ನಿಲ್ಲಿಸಿ ಇನ್ನೊಂದು ಕಡೆ ೬೪ ಟಿ. ಎಂ. ಸಿ. ನೀರು ಬಂದರೆ ನೀರು ಕೊಡುವ ವಿಷಯವನ್ನು ಯೋಚನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ ಎಷ್ಟು ನೀರು ಸಿಕ್ಕುತ್ತದೆ ಎನ್ನುವುದಕ್ಕೆ ಆಧಾರವಿದೆಯೇ?

ಶ್ರೀ ಎಚ್. ಎನ್. ನಂಜೇಗೌಡ.—ಈಗ ಒಂದು ಲಕ್ಷ ಎಕರೆಯಷ್ಟು ನೀರಾವರಿಯಾಗುತ್ತದೆ ಎಂದು ಪ್ಲಾನ್ ಮಾಡಿದ್ದೇವೆ. ೬೪ ಟಿ.ಎಂ.ಸಿ.ಎಫ್.ಟಿ. ಯಷ್ಟು ನೀರು ಹೇರಳವಾಗಿ ಬಂದರೂ ಇಷ್ಟು ಬಂದ ರೀತಿಯಲ್ಲಿ ಕ್ರಾಪ್ ಇಟ್ಟುಕೊಂಡು ಮಾಡುವುದಕ್ಕೆ ಆಗುತ್ತದೆಯೇ? ನೀರು ಇಲ್ಲದಿರುವ ಕಡೆ, ಕಡಿಮೆ ನೀರು ಸಿಕ್ಕಿದರೂ ಕೂಡ ಮೊದಲು ಹಂತದಲ್ಲಿ ಸಂಪೂರ್ಣವಾಗಿ ಡ್ರೈ ಲ್ಯಾಂಡಿಗೆ ನೀರು ಕೊಡುವುದಕ್ಕೆ ಸಾಧ್ಯವಿದೆ ಎಂದು ಸರ್ಕಾರದ ಅಭಿಪ್ರಾಯ.

2-00 P.M.

SANCTION OF PENSION OF THE TEACHERS RETIRED PRIOR TO 1st NOVEMBEL 1956.

691. SRI B. SATHYANARAYANA SINGH (Hospet).—Will the Minister for Education be pleased to state :—

(*a*) whether retired teachers who retired after 1st November 1956 are being paid pension ;

(*b*) if so, whether the Government has any proposal to extend this pension benefit to those teachers who retired prior to 1956 ;

(*c*) if not, the reasons therefor?

SRI A. R. BADARINARAYANA (Minister for Education).—

(*a*) Yes, in respect of Government teachers under Mysore Civil Service Rules while in respect of aided teachers who retired between 1st November 1956 and 31st March 1963 an *ad hoc* pension of Rs.40-00 per month including D A. and to those who retired on or after 1st April 1963, pension under Triple Benefit Scheme Rules.